ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಸ್ವಾಮಿ, ಕೆಲಸ ನಿಂತುಹೋಗಿದೆ ಎಂದು ಮಾನ ಮಂತ್ರಿಗಳು ತಿಳಿಸಿದ್ದಾರೆ. ಯಾತಕ್ಕೆ ಕೆಲಸ ನಿಂತುಹೋಯಿತಂ ಎಂಬುದನ್ನು ಹೇಳುತ್ತಾರೆಯೆ ?

ಶ್ರೀ ಕೆ. ಪ್ರಭಾಕರ್.—ಕಂಟ್ರಾಕ್ಟರ್ ಏಕಾಏಕಿ ಕೆಲಸವನ್ನು ನಿಲ್ಲಿಸಿದ್ದಾನೆ. ಆ ಬಗ್ಗೆ ಇನ್ಸ್‌ವೆಸ್ಟಿಗೇಟ್ ಮಾಡುತ್ತಿದ್ದೇವೆ ಆ ಕೆಲಸವನ್ನು ಬೇರೆಯವರಿಗೆ ವಹಿಸಿ ಕೆಲಸ ಮಾಡುವುದಕ್ಕೆ ಏರ್ಪಾಟು ಮಾಡಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಸ್ವಾಮಿ, ಇಲಾಖೆಯವರು ನಿಜವಲ್ಲದ ಸಂಗತಿಯನ್ನು ಹೇಳಿದ್ದಾರೆ. ಒಂದು ವಾರದಿಂದ ನಾನು ಆ ಊರಿನಲ್ಲಿದ್ದೆ. ಆ ಗ್ರಾಮದಲ್ಲಿ ಕೆಲಸ ನಡೆದಿಲ್ಲ ಒಂದು ಹನಿ ನೀರೂ ಕೂಡ ಬಂದಿಲ್ಲ. ಮಾನ್ಯ ಮಂತ್ರಿಗಳು ಪರೀಕ್ಷೆ ಮಾಡಿ ಅಧಿಕಾರಿಗಳು ಸುಳ್ಳು ವರದಿಯನ್ನು ನೀಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಕೂಡಲೇ ವಿಚಾರಣೆ ಮಾಡಿ ವಡದಿ ಸರಿಯಾಗಿಲ್ಲದಿದ್ದರೆ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಈ ಕಾಮಗಾರಿಯನ್ನು ಮುಗಿಸುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆಂಬುದನ್ನಾದರೂ ಹೇಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಇದು ಒಂದು ಲಕ್ಷ ಚಿಲ್ಲರೆ ರೂಪಾಯಿನ ಕೆಲಸ ಅದಷ್ಟು ಜಾಗ್ರತೆ ವಂಗಿಸುತ್ತೇವೆ. ಆದರೆ ಇಷ್ಟೇ ದಿವಸದಲ್ಲಿ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಈ ಕೆಲಸವನ್ನು ಬೇಗ ಮಾಡಿ ಮುಗಿಸಬೇಕು ಎಂಬ ಆಸೆ ಸರ್ಕಾರಕ್ಕಿದರೆ ಇಷ್ಟು ಹೊತ್ತಿಗೆ ಮಾಡಬಹುದಾಗಿತ್ತು. ಈಗ ನಡೆಯುತ್ತಿರುವ ಕೆಲಸ ಯಾವುದೂ ಸರಿಯಾಗಿ ನಡೆಯುತ್ತಿಲ್ಲ. ಇದನ್ನಾದರೂ ತಕ್ಷಣ ಮಾಡಿಸುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಅದಷ್ಟು ಜಾಗ್ರತೆ ಕೆಲಸ ಮುಗಿಸುತ್ತೇವೆ.

Power Supply to X-Ray Plant at Gulbarga.

726 SRI M. Y. PATIL (Afzalpur).—Will the Minister of State for Information and Youth Services be pleased to state.—

(*a*) whether the Assistant Executive Engineer (Electrical) KEB, Gulbarga has not given power supply to the X-Ray Plant installed at Karnataka Co-operative Hospital Ltd., Station Bazaar, Gulbarga, even though all the formalities have been completed and also power is sanctioned:

(*b*) whether the Assistant Engineer, Executive Engineer and also Superintending Engineer KEB Gulbarga have shown partisan attitude and sided en individual. and harassing the Co-operative Hospital which is the first of its kind in this backward area and aims to serve the poor and needy persons of this area :

(*c*) If so, what action Government intends to take against the above officers who are fully siding individual in the above said matter ?

SRI K. H. SRINIVAS (Minister of State for Information and Youth Services).—

(*a*) Power supply to the X-Ray plant has been given on 24th January 1979.

(*b*) No.

(*c*) Does not arise in view of reply to (b) above:

ಶ್ರೀ ಅಣ್ಣಾರಾವ್ ಪಾಟೀಲ್.—(ಶ್ರೀ ಎಂ. ವೈ. ಪಾಟೀಲ್ ಆವರ ಪರವಾಗಿ) ಗುಲ್ಬರ್ಗ ಸ್ಟೇಷನ್ ಬಜಾರಿನ ಕರ್ನಾಟಕದ ಸಹಕಾರ ಆಸ್ಪತ್ರೆಯವರು ಕ್ಷಕಿರಣ ಯಂತ್ರಕ್ಕೆ ಕರೆಂಟ್ ಕೊಡಬೇಕೆಂದು ಆರ್ಜಿ ಹಾಕಿದ ಎಷ್ಟು ದಿವಸದಮೇಲೆ ವಿದ್ಯುಚ್ಛಕ್ತಿಯನ್ನು ಸಪ್ಲೈ ಮಾಡಿದರು ?

† ಶ್ರೀ ಕೆ. ಎಚ್. ಶ್ರೀನಿವಾಸ್.—ಅವರು ೧೧ನೇ ನವಂಬರ್ ೧೯೭೮ರಲ್ಲಿ ಆರ್ಜಿ ಹಾಕಿದ್ದರು. ೨೪ನೇ ಜನವರಿ ೧೯೭೯ರಲ್ಲಿ ಅವರಿಗೆ ವಿದ್ಯುಚ್ಛಕ್ತಿ ಪೂರೈಕೆ ಮಾಡಲಾಗಿದೆ.

ಶ್ರೀ ಅಣ್ಣಾರಾವ್ ಪಾಟೀಲ್.—ಇಷ್ಟು ತಡ ಯಾತಕ್ಕೆ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ಆಸ್ಪತ್ರೆ ನಡೆಸುತ್ತಿದ್ದೇವೆ ಎಂದು ಹೇಳುತ್ತಾ ಇರುವವರು ಸೊಸೈಟಿ ಪರವಾಗಿ ವಿದ್ಯುಚ್ಛಕ್ತಿ ಮಂಡಲಿಗೆ ಆರ್ಜಿ ಹಾಕಿದರು. ಅನಂತರ ವಿವಾದ ಪ್ರಾರಂಭವಾಗಿ ಇದು ಯಾರಿಗೆ ಸೇರಿದ್ದು ಎಂಬ ಬಗ್ಗೆ ಲೀಗಲ್ ನೋಟೀಸಾಗಿ ನಮ್ಮ ಮಂಡಲಿಯಲ್ಲಿ ಅಧಿಕಾರಿಗಳ ಮೇಲೂ ಕೂಡ ನೋಟೀಸನ್ನು ಜಾರಿ ಮಾಡಿದರು. ಇದನ್ನು ಪರಿಶೀಲಿಸಿ ಆಮೇಲೆ ಆಸ್ಪತ್ರೆ ಯಾರ ಹತೋಟಿಯಲ್ಲಿತ್ತೋ ಅವರಿಂದ ನಾಳೆ ದಿವಸ ಕಾನೂನು ಪ್ರಕಾರ ತಪ್ಪಾಗಿದ್ದರೆ ಮಂಡಲಿಗೆ ಆಗುವ ಲುಕ್ಸಾನಿಗೆ ಜವಾಬ್ದಾರಿ ತೆಗೆದುಕೊಳ್ಳಬೇಕೆಂದು ತಿಳಿಸಿ ಕರೆಂಟ್ ಕೊಡಿಸಿಕೊಟ್ಟಿದ್ದಾರೆ.

Pilot Sericulture Centre at Kuderu

588 Sri M. C BASAPPA (Chamarajanagar).— Will the Minister for Sericulture and Horticulture be pleased to state :—

(a) the purpose of establishing a pilot Sericulture Centre at Kuderu ;

(b) the annual expenditure incurred on that Centre for the last 3 years ;

(c) the Staff Pattern on that Centre ?

Sri K. B SHIVAIAH (Minister for Sericulture and Horticulture)—

(a) The Main object of the scheme in to demonstrate various activities of the Sericulture Department to the Sericulturists at one Centre and providing advanced knowledge to increase production by adopting improved methods and using modern equipments.

(b) The annual expenditure incurred since 1975 to 1978 for the establishment of pilot Sericulture Centre at Kuderu are as follows :

Year	Recurring Expenditure (Rs. in Lakhs)	Non-Recurring Expenditure (Rs. in Lakhs)	Total (Rs. in Lakhs)
1975—76	1.683	0.317	2.000
1976—77	1.615	0.918	2.533
1977—78	1.248	0.904	2.152